ಎಂ ವಿ ಸಿಃ211/2020
ಪಿಡಬ್ಲ್ಯೂಃ1

ಈ ದಿನ ದಿನಾಂಕಃ19.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಕು. ಎಸ್ ಎಸ್. ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಅಂತ ಹೇಳಿ ನ್ಯಾ .ಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ದಾಖಲೆಗಳನ್ನು ನಿಶಾನೆಗೆ ಒಳಪಡಿಸುವ ಬಗ್ಗೆ ನನ್ನ ಮುಂದುವರಿದ ಮುಖ್ಯ ವಿಚಾರಣೆ ಇರುತ್ತದೆ.

ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಎಂದು, ಸ್ಥಳ ಪಂಚನಾಮೆಯನ್ನು ನಿಪಿ-3 ಎಂದು, ವಾಹನ ತಪಾಸಣಾ ಪಂಚನಾಮೆ ನಿಪಿ 4 ಎಂದು, ಯಾಂತ್ರಿಕ ತಪಾಸಣಾ ವರದಿಯನ್ನು ನಿಪಿ- 5 ಎಂದು, ಗಾಯದ ಪ್ರಮಾಣ ಪತ್ರ ನಿಪಿ-6 ಎಂದು ದೋ. ಪತ್ರವನ್ನು ನಿಪಿ- 7 ಎಂದು, ಅಂಗನ್ಯೂನತಾ ಪ್ರಮಾಣ ಪತ್ರವನ್ನು ನಿಪಿ-8 ಎಂದು, 73 ಔಷದಿ ಬಿಲ್ಲುಗಳನ್ನು ಒಟ್ಟಾಗಿ ನಿಪಿ- 9 ಅಂತ, 17 ಔಷದಿ ಚೀಟಿಗಳನ್ನು ಒಟ್ಟಾಗಿ ನಿಪಿ- 10 ಅಂತ, ಇನ್ನೊಂದು ಔಷದಿ ಬಿಲ್ಲುಗಳನ್ನು ಹಾಜರು ಮಾಡಿದ್ದು ಅವುಗಳು ಒಟ್ಟು 10 ಬಿಲ್ಲುಗಳು ಆಗಿದ್ದು ಅವುಗಳನ್ನು ಒಟ್ಟಾಗಿ ನಿಪಿ- 11 ಅಂತ ಗುರುತಿಸಲಾಯಿತು.

ಪಾಟೀ ಸವಾಲುಃ 3 ಎದುರುದಾರರ ಪರ ಶ್ರೀ ಎ ಎಂ ವಿ. ವಕೀಲರಿಂದಃ

ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುವುದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸಾ.ಸ.ಇ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ದಾವಣಗೆರೆ.

- -

ಎಂ ವಿ ಸಿಃ211/2020
ಪಿಡಬ್ಲ್ಯೂಃ1